(ಶ್ರೀ ವೀರೇಂದ್ರ ಪಾಟೀಲ್)

ಕೊಡುತ್ತೇವೆ. ಅಲ್ಲಿಯೇ ಸುತ್ತಮುತ್ತಲಿನ ಪ್ರದೇಶದಲ್ಲಿ ಸರ್ಕಾರದ ಭೂಮಿ ಇದ್ದರೆ ಅದನ್ನು ಅವರಿಗೆ ಕೊಡುತ್ತೇವೆ. ಆ ಪ್ರದೇಶದಲ್ಲಿ ಸರ್ಕಾರದ ಭೂಮಿ ಯಾವುದೂ ಇಲ್ಲದಿದ್ದರೆ ಅವರಿಗೆ ಭೂಮಿಯನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ಪ್ರಾಜೆಕ್ಟಿನಲ್ಲಿ ಭೂಮಿಯನ್ನು ಕಳೆದುಕೊಂಡಿರತಕ್ಕವರಿಗೆ ಸಂಬಂಧಪಟ್ಟಹಾಗೆ ಎಲ್ಲಿ ಭೂಮಿ ಸಿಕ್ಕುತ್ತದೆ ಎಂಬುದನ್ನು ವಿಚಾರ ಮಾಡಿ ಅಲ್ಲಿ ಭೂಮಿ ಇದ್ದರೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಪ್ರಾಜೆಕ್ಟಿಗೆ ಅವಶ್ಯಕವಾಗಿ ಬೇಕಾದಂತಹ ಸರಿಯಾದ ಸ್ಥಳ ಇನ್ನೂ ಸಿಕ್ಕದೇ ಇರುವಾಗ ಯಾರೋ ಒಬ್ಬರು ದೊಡ್ಡಮನುಷ್ಯರಿಗೆ ಗೌರವ ಕೊಡುವ ದೃಷ್ಟಿಯಿಂದ ಅತುರ ಅತುರವಾಗಿ ಆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಮಾನ್ಯ ಸದಸ್ಯರಿಗೆ ಈ ವಿಚಾರ ಗೊತ್ತಿರಬಹುದು. ಏತಕ್ಕೆಂದರೆ ಅವರು 1952 ನೇ ಇನಪಿಯಿಂದ ಈ ಸಭೆಯ ಸದಸ್ಯರಾಗಿದ್ದಾರೆ. ಮಂಚಿನಬೆಲೆ ಪ್ರಾಜೆಕ್ಟ್ ಆಗಬೇಕೆಂದು ಆ ಭಾಗದ ಜನತೆ ಅನೇಕವರ್ಷಗಳಿಂದ ಕೇಳುತ್ತಿದ್ದರು. ಅದಕೊಸ್ಕರ ಆ ಪ್ರಾಜೆಕ್ಟಿನ ಕೆಲಸವನ್ನು ತೆಗೆದುಕೊಳ್ಳಬೇಕಾಗಿ ಬಂತು. ಕೇಂದ್ರಸರ್ಕಾರದ ನೀರಾವರಿ ಮಂತ್ರಿಗಳಾದ ಶ್ರೀ ಕೆ. ಎಲ್. ರಾವ್ ಅವರು ಅಲ್ಲಿಗೆ ಬಂದು ಆ ಸ್ಥಳ ಪರಿಶೀಲನೆ ಮಾಡಿ ಆ ಸ್ಥಳದಲ್ಲಿ ಕಟ್ಟಬೇಕು ಎಂದು ಅವರು ಹೇಳಿದರು. ಆ ನಂತರ ಆ ಸ್ಥಳವನ್ನು ಪರಿಶೀಲನೆ ಮಾಡಿ, ಸರ್ವೆ ಮಾಡಿ ಆ ಪ್ರಾಜೆಕ್ಟಿನ ಪ್ಲಾನು ಮತ್ತು ಎಸ್ಟಿಮೇಟು ತಯಾರು ಮಾಡಿ ಅದರಬಗ್ಗೆ ರಿಪೋರ್ಟ್ ತಯಾರು ಮಾಡಿ ಅದಕ್ಕೆ ಕೇಂದ್ರ ಸರ್ಕಾರದ ಮನ್ನಣೆ ಪಡೆದಮೇಲೆ ಅದಕ್ಕೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟು ಹಣ ಕೊಟ್ಟಮೇಲೆ ಆ ಯೋಜನೆಗೆ ಫೌಂಡೇಷನ್ ಸ್ಟೋನ್ ಹಾಕಿದೆ. ಅದನ್ನು ಅತುರಅತುರವಾಗಿಯೇನೂ ಮಾಡಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಪ್ರಾಜೆಕ್ಟನ್ನು ಕಟ್ಟುವ ಸ್ಥಳ ಇಂಜಿನಿಯರಿಂದ ಇನ್ನೂ ನಿರ್ದಿಷ್ಟವಾಗಿ ತೀರ್ಮಾನವಾಗದೇ ಇರುವಾಗ ಆ ಪ್ರಾಜೆಕ್ಟಿಗೆ ಫೌಂಡೇಷನ್ ಸ್ಟೋನ್ ಹಾಕುವ ಅತುರ ಏನಿತ್ತು ?

ಶ್ರೀ ವೀರೇಂದ್ರ ಪಾಟೀಲ್.—ಫೌಂಡೇಷನ್ ಸ್ಟೋನ್ ಹಾಕುವುದಾದ್ದು ಯಾವ ಸ್ಥಳದಲ್ಲಿ ಯಾವ ಪ್ರಾಜೆಕ್ಟನ್ನು ಕಟ್ಟುತ್ತೇವೆಯೋ ಆ ಪ್ರಾಜೆಕ್ಟಿನ ಒಂದು ಸಂಕೇತದ ಸಲುವಾಗಿ ಫೌಂಡೇಷನ್ ಸ್ಟೋನ್ ಹಾಕುತ್ತೇವೆ ಅಲ್ಲಿ ಒಂದು ಸಮಾರಂಭವನ್ನು ಮಾಡುತ್ತೇವೆ. ಆದರೆ ನಾವು ಫೌಂಡೇಷನ್ ಕಲ್ಲು ಎಲ್ಲಿ ಇಡುತ್ತೇವೆಯೋ ಅಲ್ಲಿಯೇ ಪ್ರಾಜೆಕ್ಟನ್ನು ಕಟ್ಟಬೇಕೆಂದು ಅಲ್ಲ. ಆ ಪ್ರದೇಶದಲ್ಲಿ ಅನುಕೂಲವಾದ ಒಂದು ಸ್ಥಳದಲ್ಲಿ ಪ್ರಾಜೆಕ್ಟನ್ನು ಕಟ್ಟಬೇಕಾಗುತ್ತದೆ. ಆ ಪ್ರಾಜೆಕ್ಟನ್ನು ಎಲ್ಲಿ ಕಟ್ಟಬೇಕು ಎನ್ನುವ ಬಗ್ಗೆ ಮೊದಲು ವಿವಾದವಿತ್ತು. ಆದರೆ ಡಾ. ಕೆ. ಎಲ್. ರಾವ್ ಅವರು ಸ್ಥಳ ಪರಿಶೀಲನೆ ಮಾಡಿ ಯಾವ ಸ್ಥಳದಲ್ಲಿ ಅದನ್ನು ಕಟ್ಟಬೇಕೆಂದು ಹೇಳಿದ್ದಾರೆಯೋ ಆ ಸ್ಥಳವನ್ನು ಸರ್ವೆ ಮಾಡಿ ಅದಕ್ಕೆ ಪ್ಲಾನು ಮತ್ತು ಎಸ್ಟಿಮೇಟನ್ನು ತಯಾರು ಮಾಡಿ ಅದನ್ನು ಅಪ್ರೂವ್ ಮಾಡಿ ಅಲ್ಲಿ ಫೌಂಡೇಷನ್ ಸ್ಟೋನ್ ಹಾಕಿದೆ.

ಅಧ್ಯಕ್ಷರು.—ಪ್ರಶ್ನೆ ನಂ. 40 ಹಾಕುವುದಕ್ಕೆ ಶ್ರೀ ಕೆ. ಎಂ. ತಮ್ಮಯ್ಯನವರಿಗೆ ಅಪ್ಪಣೆ ಕೊಟ್ಟಿದ್ದೇನೆ.

Complaints against large scale Service Co-operative Society, Malkhed

40 Sri K. M. THAMMIAH (Kadur) [On behalf of Sri J. P. SARWESH (Sedam)].—

Will the Minister for Development be pleased to state :—

(*a*) the number of complaints received by the Deputy Registrar and Assistant Registrar, Gulbarga District regarding L. S. S. Co-operative Society, Malkhed, Sedam Taluk, Gulbarga District since 28th Spetmber 1965 ;

(*b*) the number of complaints from 1966 up to a latest convenient date ;

(*c*) the reasons for allowing L. S. S. Co-operative Society, Malkhed to function for the past 12 years without holding the General Body Meeting of the share holders ;

(*d*) the action the Co-operative Department has taken to see that the General Body Meeting of the abovementioned society is held ;

(*e*) the reasons for Government in not instituting an enquiry into the affairs of the L. S. S. Co-operative Society, Malkhed Taluk, Sedam ?

Sri B. L. GOWDA (Deputy Minister for Co-operation).—

(*a*) Two complaints were receivd since 28th September 1965 to date.

(*b*) Thirty-four.

(*c*) The General Body Meetings are held for the past 12 years. For the year 1968-69, Extension of time for holding the General body has been granted up to December 1969, as per provisions of the M. C. S. Act, 1959.

(*d*) This does not arise in view of reply to clause (*c*).

(*e*) Statutory enquiry is found to be not necessary.

ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ, ಕಳೆದ ಹನ್ನೆಡು ವರ್ಷಗಳಿಂದಲೂ ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಮೆಲಖೇಡ್‌ನಲ್ಲಿರುವ ದೊಡ್ಡ ಪ್ರಮಾಣದ ಸೇವಾ ಸಹಕಾರ ಸಂಘದ ಜನರಲ್ ಬಾಡಿ ಮೀಟಿಂಗ್ ಕರೆಯದೇ ಇರುವುದಕ್ಕೆ ಕಾರಣವೇನು ?

† ಶ್ರೀ ಬಿ. ಎಲ್. ಗೌಡ.—ಕಳೆದ ಹನ್ನೆರಡು ವರ್ಷಗಳಿಂಲೂ ಆ ಸಹಕಾರ ಸಂಘದ ಜನರಲ್ ಬಾಡಿ ಮೀಟಿಂಗ್ ಅನ್ನು ಕರೆದಿದ್ದಾರೆ. ಆದರೆ 1968-69ನೇ ಸಾಲಿಗೆ ಸಂಬಂಧಪಟ್ಟ ಹಾಗೆ ಮಾತ್ರ ಆ ಸಹಕಾರ ಸಂಘದ ಜನರಲ್‌ಬಾಡಿ ಮೀಟಿಂಗ್ ಅನ್ನು ಸಾವಕಾಶವಾಗಿ ಕರೆಯಲು ರಿಜಿಸ್ಟ್ರಾರ್ ಅವರು ಅನುಮತಿಯನ್ನು ಕೊಟ್ಟಿದ್ದಾರೆ.

Sri K. H. PATIL.—What is the nature of the complaints before the Government or the Registrar against this Society and what are the reasons that necessitated the Registrar to ignore the provisions and give them sanction for extending the time of the general body meeting ?

ಶ್ರೀ ಬಿ. ಎಲ್. ಗೌಡ.—ಆ ಸಹಕಾರ ಸಂಘದ 31 ಜನ ಮಾನ್ಯ ಸದಸ್ಯರು ಆ ಸಂಘದ ಎಲ್ಲಾ ಸದಸ್ಯರಿಗೂ ಸರಿಯಾಗಿ ಆ ಸಂಘದಲ್ಲಿ ಸಾಲವನ್ನು ಕೊಡುತ್ತಿಲ್ಲ, ಅದ್ದರಿಂದ ಅನಾನು ಕೂಲವಾಗಿದೆ ಎಂದು ದೂರು ಕೊಟ್ಟಿದ್ದರು. ಆದ್ದರಿಂದ ಆ ಬಗ್ಗೆ ವಿಚಾರಣೆ ಮಾಡಲಾಗಿದೆ, ಯಾರಿಗೂ ಆ ತರಹ ತೊಂದರೆಯಾಗಿಲ್ಲ ಎಂದು ಅಲ್ಲಿಂದ ವರದಿ ಬಂದಿದೆ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಆ ಕೋಆಪರೇಟೀವ್ ಸೊಸೈಟಿಯ ಅಧ್ಯಕ್ಷರು ಯಾರು ಎಂಬುದನ್ನು ದಯವಿಟ್ಟು ತಿಳಿಸಬೇಕು. ಅವರು ಒಬ್ಬರು ಕಾಂಗ್ರೆಸ್ ಎಂ. ಪಿ. ಆದ ಕಾರಣ ಈಗ 12 ವರ್ಷಗಳಿಂದಲೂ ಆ ಸಹಕಾರ ಸಂಘ ಜನರಲ್ ಬಾಡಿ ಮೀಟಿಂಗ್ ಕರೆಯುವೆ ಅಲ್ಲಿ ಸುಳ್ಳು ಕಾಗದ ಪತ್ರಗಳನ್ನು ತಯಾರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆ ಬಗ್ಗೆ ತಾವು ಏನು ಕ್ರಮತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಎಲ್. ಗೌಡ.—ಅವರು ಯಾವ ಪಕ್ಷದವರು ಎನ್ನುವ ಬಗ್ಗೆ ನಾವು, ರೆಕಾರ್ಡ್ ಇಟ್ಟುಕೊಳ್ಳುವುದಿಲ್ಲ. ಈಗ ನನ್ನ ಹತ್ತಿರ ಇರುವ ದಾಖಲೆಯ ಪ್ರಕಾರ ಪ್ರತಿ ವರ್ಷ ಆ ಸಹಕಾರ ಸಂಘದ ಜನರಲ್‌ಬಾಡಿ ಮೀಟಿಂಗ್ ನಡೆಯುತ್ತಿದೆ. 1968-69 ನೇ ಸಾಲಿನ ಜನರಲ್ ಬಾಡಿ ಮೀಟಿಂಗ್ ಮಾತ್ರ ನಡೆದಿಲ್ಲ. ಅಲ್ಲಿ ಯಾರಿಗೂ ತೊಂದರೆಯಾಗಿಲ್ಲ. ಆ ಸಹಕಾರ ಸಂಘದ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಟ್ಟರೆ ಅದನ್ನು ತನಿಖೆ ಮಾಡುತ್ತೇವೆ.

Sri D. B. KALMANKAR.—May I know what is the nature of the complaints of these 34 persons ?

Sri B. L. GOWDA.—I have already explained that these people have complained that loan and other facilities have not been extended to all the members, but it is reported that the allegations are not true

Management of Hotel Krishnarajasagar

41. Sri N. A. CHANNEGOWDA (Pandavapura).—

Will the Chief Minister be pleased to state :—

(*a*) the name of the Management that is running 'Hotel Krishnarajasagar' at K. R. S. ;

(*b*) the rent the present management is paying and how long it holds the contract for running the said hotel ;

(*c*) when was the hotel building handed over to the management and whether at that time all inventories relating to furniture and cutlery articles of the hotel were made ;

(*d*) whether any furniture articles of rare type was replaced by the Government or the Management after the contract was entered into between the Management and the Government ?

Sri VEERENDRA PATIL (Chief Minister).—

(*a*) Messrs. Ritz (P) Ltd., Bombay.

(*b*) Rs. 36,000 per year (including Hotel Metropole and Indian Restaurant at K. R. S.). The contract is for 10 years.

(*c*) The hotel building was handed over on 30th September 1961. An inventory of furniture sold to the Management was prepared.

(*d*) Does not arise as the furniture was sold outright to the Lessee.

ಶ್ರೀ ಎನ್. ಎ. ಚನ್ನೇಗೌಡ.—ಸ್ವಾಮಿ, ಕೃಷ್ಣರಾಜಸಾಗರದಲ್ಲಿರುವ ಮೆಟ್ರೋಪೋಲ್ ಮತ್ತು ಇಂಡಿಯನ್ ರೆಸ್ಟೋರೆಂಟಗಳನ್ನೊಳಗೊಂಡಂತೆ ಪ್ರತಿವರ್ಷಕ್ಕೆ 36 ಸಾವಿರ ರೂಪಾಯಿಗಳನ್ನು ಪಡೆಯುತ್ತಿದ್ದೇವೆ ಎಂದು ಹೇಳಿದ್ದೀರಿ. ರಾಜ್ಯದಲ್ಲಿ ಯಾವುದಾದರೂ ಅಭಿವೃದ್ಧಿಕಾರ್ಯಗಳನ್ನು ಮಾಡಬೇಕು ಎಂದರೆ ಸರ್ಕಾರದಲ್ಲಿ ಹಣವಿಲ್ಲ ಎಂದು ಹೇಳುತ್ತೀರಿ, ಒಂದು ತಿಂಗಳಿಗೆ 60 ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡತಕ್ಕವರಿಂದ ಒಂದು ತಿಂಗಳಿಗೆ 3 ಸಾವಿರ ರೂಪಾಯಿಗಳನ್ನು ಮಾತ್ರ ಆ ಹೋಟೆಲುಗಳಿಂದ ಪಡೆಯುತ್ತಿರುವುದು ತುಂಬಾ ಕಡಿಮೆ ಅಲ್ಲವೇ ?